OS 1/2015

DW 4

ದಿನಾಂಕ 05.08.2021 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ವಾದಿ ಪರ ಶ್ರೀ ಇ ಎನ್ ವಕೀಲರಿಂದಃ

2. ನಾನು ಆರ್ ಸಿ ಪಾಟೀಲರ ಮನೆಯಲ್ಲಿ ಇದ್ದು, ಅವರ ಜಮೀನುಗಳ ಉಸ್ತುವಾರಿ ನೋಡಿಕೊಂಡು ಹೋಗುತ್ತಿದ್ದೆ ಎಂದರೆ ಸರಿ. ಆರ್ ಸಿ ಪಾಟೀಲರ ಹೆಂಡತಿ ಮತ್ತು ಮಕ್ಕಳ ಪರಿಚಯ ಇದೆ. ವಾದಿಯರು ಆರ್ ಸಿ ಪಾಟೀಲರ ಮಕ್ಕಳು ಎಂದರೆ ಸರಿ. ನಾನು ಕಳೆದ 30 ವರ್ಷಗಳಿಂದ ಆರ್ ಸಿ ಪಾಟೀಲರ ಮನೆಯಲ್ಲಿದ್ದೇನೆ. ನಾನು ಆರ್ ಸಿ ಪಾಟೀಲರ ಮನೆಗೆ ಕೆಲಸಕ್ಕೆ ಹೋದಾಗ ವಾದಿಯರು ಚಿಕ್ಕ ಮಕ್ಕಳು ಎಂದರೆ ಸರಿ. ಆರ್ ಸಿ ಪಾಟೀಲರು ತಮ್ಮ ಜೀವಿತ ಕಾಲದಲ್ಲಿ ಯಾವುದೇ ಆಸ್ತಿಗಳನ್ನು ಖರೀದಿಸಿಲ್ಲ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ಆರ್ ಸಿ ಪಾಟೀಲರ ಕುಟುಂಬದ ಆಸ್ತಿಗಳು ಎಂದರೆ ಸರಿ. ನಾನು ಖರೀದಿಗೆ ಪಡೆದ ಆಸ್ತಿಯಲ್ಲಿ ವಾದಿಯರಿಗೆ ಹಕ್ಕು ಇದೆ ಮತ್ತು ಆ ಖರೀದಿ ಪತ್ರ ಅವರ ಹಕ್ಕಿಗೆ ಬಂಧನಕಾರಿ ಅಲ್ಲ ಎಂದರೆ ಸರಿಯಲ್ಲ. ಆರ್ ಸಿ ಪಾಟೀಲರಿಗೆ ವಾದಿಯರು ಮಕ್ಕಳಿದ್ದಾರೆ ಎಂದು ಗೊತ್ತಿದ್ದು ಕೂಡ ನಾನು ಖರೀದಿ ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಆರ್ ಸಿ ಪಾಟೀಲರು ನನಗೆ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ವಾದಿಯರಿಗೆ ಆರ್ ಸಿ ಪಾಟೀಲರು ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರ ಗಂಡು ಮಕ್ಕಳಿಗೆ ಹಿಸ್ಸೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾನು ಖರೀದಿಸಿದ ಆಸ್ತಿಯಲ್ಲಿ ವಾದಿಯರಿಗೆ ಹಕ್ಕು ಇದೆ ಎಂದು ಗೊತ್ತಿದ್ದರೂ ಕೂಡ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಕ್ರಯದ ಮೊಬಲಗನ್ನು ಕೊಡದೇ ಖರೀದಿ ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.

ದಿನಾಂಕ 05.08.2021 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ವಾದಿ ಪರ ಶ್ರೀ ಇ ಎನ್ ವಕೀಲರಿಂದಃ

2. ಆರ್ ಸಿ ಪಾಟೀಲರೊಂದಿಗೆ ನಾನು ಉತ್ತಮ ಒಡನಾಟ ಹೊಂದಿದ್ದೆ ಎಂದರೆ ಸರಿ. ನಾನು 3 ನೇ ಪ್ರತಿವಾದಿಯವರೊಂದಿಗೂ ಕೂಡ ಉತ್ತಮ ಒಡನಾಟ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನಾನು, ಪ್ರತಿವಾದಿ ನಂ. 6 ಮತ್ತು ಪ್ರತಿವಾದಿ ನಂ. 8 ಒಟ್ಟಿಗೆ ಒಂದೇ ಪ್ರತಿವಾದ ಪತ್ರ ಸಲ್ಲಿಸಿದ್ದೇವೆ ಎಂದರೆ ಸರಿ. ಆರ್ ಸಿ ಪಾಟೀಲರು ತುಂಬಾ ಅನುಕೂಲಸ್ಥರು ಇದ್ದರು ಎಂದರೆ ಸರಿಯಲ್ಲ. ಆರ್ ಸಿ ಪಾಟೀಲರು ದೊಡ್ಡ ಜಮೀನುದಾರರಾಗಿದ್ದರು ಎಂದರೆ ಸರಿ. ನಿಡಿ 61 ರಂತೆ ಆಸ್ತಿ ಕುರಿತು ಖರೀದಿ ಪತ್ರ ಬರೆದುಕೊಡಲು ಆರ್ ಸಿ ಪಾಟೀಲರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ 61 ಕ್ಕೆ 6 ನೇ ಪ್ರತಿವಾದಿ ಸಾಕ್ಷಿದಾರರು ಎಂದು ಸಹಿ ಹಾಕಿರುತ್ತಾರೆ. ಆರ್ ಸಿ ಪಾಟೀಲರು ಯಾವಾಗ ತೀರಿಕೊಂಡರು ಎಂದು ಈಗ ನೆನಪಿಲ್ಲ. ನಿಡಿ 61 ಬರೆದುಕೊಟ್ಟ 2-3 ವರ್ಷಗಳ ನಂತರ ಅವರು ತೀರಿಕೊಂಡಿರುತ್ತಾರೆ. ನನಗೆ ಪತ್ರ ಬರೆದುಕೊಟ್ಟ ತಿಂಗಳಿನಲ್ಲಿಯೇ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 3, 6 ಮತ್ತು ನಾನು ಮತ್ತು ವೀರಭದ್ರಪ್ಪ ಎನ್ನುವವರು ಸೇರಿಕೊಂಡು ಆರ್ ಸಿ ಪಾಟೀಲ್ ಇವರ ವಿಲ್ ನಾಮೆಯನ್ನು ನಿಡಿ 4 ರಂತೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ 4 ಆದ ದಿನದಂದೇ ನಿಡಿ 5 - ದಾನಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 6 ಎಲ್ಲಿ ಮತ್ತು ಎಷ್ಟು ಗಂಟೆಗೆ ಆಯಿತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಆ ದಾಖಲೆಯು ತಾಲ್ಲೂಕು ಕಚೇರಿಯಲ್ಲಿ ಆಯಿತು ಎಂದು ಹೇಳುತ್ತಾರೆ. ಆ ದಾಖಲೆಯನ್ನು ಚನ್ನಬಸಪ್ಪ ವಕೀಲರು ಬರೆದಿರುತ್ತಾರೆ. ಆ ಸಮಯದಲ್ಲಿ ಪ್ರತಿವಾದಿ ನಂ. 6 ಹಾಜರಿದ್ದರು. ಆ ಸಮಯದಲ್ಲಿ ಆರ್ ಸಿ

ಪಾಟೀಲರ ಆರೋಗ್ಯ ತುಂಬಾ ಕ್ಷೀಣವಾಗಿತ್ತು ಎಂದರೆ ಸರಿಯಲ್ಲ. ವಾದಿಯರು ಆರ್ ಸಿ ಪಾಟೀಲರ ಮಕ್ಕಳು ಎಂದರೆ ಸರಿ. ಅದೇ ರೀತಿ ಪ್ರತಿವಾದಿ ನಂ. 2 ಮತ್ತು 3 ನೇ ಪ್ರತಿವಾದಿಯ ಗಂಡ ಮಲ್ಲನಗೌಡ ಗಂಡು ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ ಆರ್ ಸಿ ಪಾಟೀಲರ ಹೆಂಡತಿ ಎಂದರೆ ಮೊದಲನೇ ಹೆಂಡತಿ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳು ಆರ್ ಸಿ ಪಾಟೀಲರಿಗೆ ಪಿತ್ರಾರ್ಜಿತ ಆಸ್ತಿಗಳು ಇದ್ದು, ಅವರಿಗೆ ಕುಟುಂಬದ ವಿಭಾಗದಲ್ಲಿ ಬಂದಿವೆ ಎಂದರೆ ಸರಿ. ವಾದಿಯರಿಗೆ ದಾವಾ ಆಸ್ತಿಗಳಲ್ಲಿ ಜನ್ಮಸಿದ್ಧ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ಕ್ರಯಪತ್ರ ವಾದಿಯರ ಹಕ್ಕಿಗೆ ಅಡ್ಡ ಬರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.